# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಶಹಾಬಾದ</u>

<u>ಸಿಸಿ ನಂ.</u>126/2021

**<u>ಫಿರ್ಯಾದಿಃ</u>** ಸರಕಾರದ ಪರವಾಗಿಃ ಶಹಾಬಾದ ನಗರ ಪೊಲೀಸ ಠಾಣೆ.

**-ಃಃ ವಿರುದ್ದ ಃಃ-**

**<u>ಆರೋಪಿಃ</u>**

ಶರಣಪ್ಪಾ ತಂದೆಃ ಸಾಯಿಬಣ್ಣಾ ಸಣಮೊ ಅಲಿಯಾಸ ಮಾಲಗತ್ತಿ,
ವಃ 50 ವರ್ಷ, ಉಃ ವ್ಯಾಪಾರ,
ಸಾಃ ಮಾಲಗತ್ತಿ.

**<u>ದೋಷಾರೋಪಣೆ</u>**

ನಾನು ಶ್ರೀ ಮಲ್ಲೇಶಿ ಪರಶುರಾಮ ಮೋಹಿತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಶಹಾಬಾದ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 20/07/2020 ರಂದು ಬೆಳಿಗ್ಗೆ 11ಃ30 ರ ಸಮಯದಲ್ಲಿ, ಶಹಾಬಾದ ನಗರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಮಾಲಗತ್ತಿ ಸೀಮಾಂತರ ಹೊಲ ಸರ್ವೇ ನಂಃ 161 ರ ಜಮಿನೀನಲ್ಲಿ ಚಾಸಾ-1 ರವರು ತಮ್ಮ ಹೊಲ ಸರ್ವೇ ಮಾಡಿಸಲು ತಮ್ಮ ಹೊಲಕ್ಕೆ ಬಂದಾಗ ಆರೋಪಿಯಾದ ನೀವು ಚಾಸಾ-1 ರವರ ಹೊಲಕ್ಕೆ ಒತ್ತಾಯ ಪೂರ್ವಕವಾಗಿ ಬಂದಿದ್ದು, ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದ.ಸಂ.ಕಲಂ. 448 ರರಡಿಯಲ್ಲಿ ಅಪರಾಧ ವೆಸಗಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೇಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-1 ರವರ ಹೊಲಕ್ಕೆ ಒತ್ತಾಯ ಪೂರ್ವಕವಾಗಿ ಬಂದು ಅವರನ್ನು ತಡೆದು ನಿಲ್ಲಿಸಿ ತಡೆಯನ್ನೊಡ್ಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.341 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ.1 ರವರಿಗೆ ಈ ಜಮೀನಿನಲ್ಲಿ ಗಣಿಗಾರಿಕೆಯನ್ನು ಮಾಡುತ್ತೇನೆ ನೀನು ಏನು ಮಾಡಿಕೊಳ್ಳುತ್ತಿ ಮಾಡಿಕೋ ನಿನಗೆ ಒಂದು ಕೈ ನೋಡಿಯೇ ಬಿಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**<u>ಆರೋಪಿಯ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

-Sd-

ದಿನಾಂಕಃ 02/06/2022 ಪ್ರ.ದ.ನ್ಯಾ.ದಂ. ಶಹಾಬಾದ